# ಟ್ವಿಟರ್‌ನಲ್ಲೀಗ ಎಡಿಟ್ ಪರ್ವ!

**ಅಮೆರಿಕದ ಸ್ಯಾನ್‌ಫ್ರಾನ್ಸಿಸ್ಕೊದಲ್ಲಿ 2006ರ ಮಾರ್ಚ್ 21ರಂದು ಶುರುವಾದ ಟ್ವಿಟರ್, ಪ್ರಸ್ತುತ ಜಗತ್ತಿನ ಪ್ರಬಲ ಸಾಮಾಜಿಕ ಮಾಧ್ಯಮ ಎನ್ನಿಸಿಕೊಂಡಿದೆ. ಆರಂಭಗೊಂಡ 16 ವರ್ಷಗಳ ನಂತರ ಕಂಪನಿಯು 'ಟ್ವೀಟ್ ಎಡಿಟ್' ಆಯ್ಕೆಯನ್ನು ಪರಿಚಯಿಸಿದೆ.**

**■ ಶಶಿಕುಮಾರ್ ಸಿ.**

ಗ್ರಾಹಕರ ಬಹುವರ್ಷಗಳ ಬೇಡಿಕೆಗೆ ಕಡೆಗೂ ಸ್ಪಂದಿಸಿರುವ ಟ್ವಿಟರ್ ಕಂಪನಿ, ತನ್ನ 'ಟ್ವಿಟರ್ ಬ್ಲೂ' ಬಳಕೆದಾರರಿಗೆ ಈಚೆಗೆ 'ಟ್ವೀಟ್ ಎಡಿಟ್' ಫೀಚರ್ ಅನ್ನು ಪರಿಚಯಿಸಿದೆ. ಈ ಬಗ್ಗೆ ಸಾಮಾಜಿಕ ಜಾಲತಾಣಗಳಲ್ಲಿ ಟ್ವಿಟಿಗರ ಸಂತಸ ವ್ಯಕ್ತವಾಗುತ್ತಿದೆ. ಸದ್ಯಕ್ಕೆ ಈ ಫೀಚರ್ ಕೆನಡಾ, ಆಸ್ಟ್ರೇಲಿಯಾ, ನ್ಯೂಜಿಲೆಂಡ್‌ನಲ್ಲಿ ಬಳಕೆಗೆ ಮುಕ್ತವಾಗಿದೆ. ಅಮೆರಿಕ ಮತ್ತು ಇತರ ದೇಶಗಳಲ್ಲಿ ಸದ್ಯದಲ್ಲೇ ಜಾರಿಗೆ ಬರಲಿದೆ. ಅಮೆರಿಕದಲ್ಲಿ ಇದು ಪ್ರಾಯೋಗಿಕ ಹಂತದಲ್ಲಿದೆ.

'ಎಡಿಟ್ ಟ್ವೀಟ್' ಫೀಚರ್ ಅನ್ನು, ಪೋಸ್ಟ್ ಮಾಡಿದ ಒಂದು ನಿಮಿಷದ ಒಳಗೆ ಟ್ವೀಟ್‌ಗಳನ್ನು ತಡೆಯಬಹುದಾಗಿದೆ. ಪೋಸ್ಟ್ ಮಾಡಿದ 30 ನಿಮಿಷದ ಒಳಗೆ ಪೋಸ್ಟ್‌ನಲ್ಲಿ ತಪ್ಪುಗಳು ಉಳಿದುಕೊಂಡಿದ್ದರೆ ಅವುಗಳನ್ನು ಸರಿಪಡಿಸಿ ರೀಪೋಸ್ಟ್ ಮಾಡಬಹುದು. 30 ನಿಮಿಷದ ನಂತರ ಎಡಿಟ್ ಮಾಡಲು ಸಾಧ್ಯವಿಲ್ಲ! ಕಾಗುಣಿತ ದೋಷಗಳನ್ನು ಸರಿಪಡಿಸುವುದು, ಇನ್ನಷ್ಟು ಮಾಹಿತಿ ಸೇರಿಸುವುದು, ಮಾಹಿತಿಯನ್ನು ಅಳಿಸಿಹಾಕುವುದು, ಟ್ಯಾಗ್‌ಗಳನ್ನು ಹಾಕುವುದು ಸೇರಿದಂತೆ ಹಲವು ರೀತಿಯಾಗಿ ಎಡಿಟ್ ಆಯ್ಕೆ ನೆರವಾಗಲಿದೆ.

ಬಳಕೆದಾರರು ಒಮ್ಮೆ ಪೋಸ್ಟ್ ಮಾಡಿದ ತಮ್ಮ ಟ್ವೀಟ್‌ನಲ್ಲಿ ತಪ್ಪುಗಳಿದ್ದರೆ ಅದನ್ನು ಡಿಲೀಟ್ ಮಾಡಿ ಮತ್ತೊಮ್ಮೆ ಬೇರೆ ಟ್ವೀಟ್ ಪೋಸ್ಟ್ ಮಾಡಬೇಕಿದ್ದ ಮತ್ತು ಪೋಸ್ಟ್‌ನಲ್ಲಿ ತಪ್ಪುಗಳಿದ್ದರೂ ಅವುಗಳನ್ನು ಸರಿಪಡಿಸಲಾಗದೆ ಹಾಗೆಯೇ ಉಳಿಸಿಕೊಳ್ಳುವ ಪರಿಸ್ಥಿತಿ ಟ್ವಿಟರ್‌ನಲ್ಲಿ ತೀರಾ ಈಚಿನವರೆಗೂ ಇತ್ತು. ಈ ಬಗ್ಗೆ ಬಳಕೆದಾರರು ತೀವ್ರ ಆಕ್ಷೇಪ ವ್ಯಕ್ತಪಡಿಸಿ, 'ಟ್ವೀಟ್ ಎಡಿಟ್' ಆಯ್ಕೆಯನ್ನು ಒದಗಿಸುವಂತೆ ಬೇಡಿಕೆ ಇಟ್ಟಿದ್ದರು. ಆ ಬೇಡಿಕೆಗೆ ಮಣೆಯದ ಕಂಪನಿ, ಟ್ವಿಟರ್‌ನಲ್ಲಿ ಎಡಿಟ್ ಆಯ್ಕೆಯನ್ನು ಪರಿಚಯಿಸುವುದಿಲ್ಲ ಎಂದು ಕಡ್ಡಿ ತುಂಡಾದಂತೆ ಹೇಳುತ್ತಲೇ ಬಂದಿತ್ತು.

ಹೊಸ ಫೀಚರ್‌ನಲ್ಲಿ 'ಲೇಬಲ್', 'ಟೈಮ್‌ಸ್ಟ್ಯಾಂಪ್'ನಂತಹ ಗುರುತಿಸುವ ಐಕಾನ್‌ಗಳೊಂದಿಗೆ ಆಕರ್ಷಿಸುತ್ತದೆ. ಈ ಮೊದಲಿನಂತೆಯೇ ಟ್ವಿಟರ್‌ನಲ್ಲಿ ಪೋಸ್ಟ್ ಮಾಡಬಹುದಾಗಿದ್ದು, ಎಡಿಟ್ ಮಾಡುವ ಸಂದರ್ಭ ಎದುರಾದಾಗ ಪೋಸ್ಟ್‌ನ ಬಲಬದಿಯಲ್ಲಿ ಕಾಣುವ ಮೂರು ಚುಕ್ಕೆಗಳ ಆಯ್ಕೆಯನ್ನು ಕ್ಲಿಕ್ಕಿಸಿದರೆ 'ಎಡಿಟ್ ಟ್ವೀಟ್' ಆಯ್ಕೆ ಕಾಣುತ್ತದೆ. ಅದನ್ನು ಕ್ಲಿಕ್ಕಿಸಿ ಟ್ವೀಟ್ ಅನ್ನು ಎಡಿಟ್ ಮಾಡಿ ಪೋಸ್ಟ್ ಮಾಡಬಹುದು. ಟೈಮ್ ಸ್ಟ್ಯಾಂಪ್ ಮತ್ತು ಟ್ವೀಟ್ ಲೇಬಲ್ ಮೂಲಕ, ಬಳಕೆದಾರರು ಪೋಸ್ಟ್ ಅನ್ನು ಕೊನೆಯದಾಗಿ ಯಾವಾಗ ಎಡಿಟ್ ಮಾಡಿದ್ದಾರೆ ಎಂಬುದನ್ನು ತಿಳಿಯಬಹುದು.

ಪ್ರಾಯೋಗಿಕವಾಗಿ ಅಮೆರಿಕದಲ್ಲಿ ಎಲ್ಲ ವರ್ಗದ ಬಳಕೆದಾರರಿಗೂ ಎಡಿಟ್ ಆಯ್ಕೆಯನ್ನು ಪರಿಚಯಿಸಲಾಗಿದೆ. ಟ್ವೀಟ್ ಪೋಸ್ಟ್ ಮಾಡಿದ ಒಂದು ನಿಮಿಷದವರೆಗೆ ಅದನ್ನು ಹೋಲ್ಡ್ ಮಾಡಿ, ಪರಿಶೀಲಿಸಿ ಪ್ರಕಟಿಸುವ ಅಥವಾ 'ಅನ್‌ಡು' ಮಾಡುವ ಅವಕಾಶವನ್ನು ಕಲ್ಪಿಸಲಾಗಿದೆ. ಎಡಿಟ್ ಆಯ್ಕೆಯಲ್ಲಿನ ಬದಲಾವಣೆಗಳನ್ನು ಇದು ಸೂಚಿಸುತ್ತದೆ. ಇದರಲ್ಲಿ ಟ್ವೀಟ್ ಎಡಿಟ್ ಆಗಿದೆಯೇ ಎಂಬ ಲೇಬಲ್ ಕಾಣಿಸುವುದಿಲ್ಲ. ಬದಲಿಗೆ ಒಂದು ನಿಮಿಷದ ನಂತರ ಎಡಿಟ್ ಮಾಡಲಾದ ಟ್ವೀಟ್‌ಗಳ ಮೇಲೆ 'ಎಡಿಟ್ ಮಾಡಲಾಗಿದೆ' ಎಂದು ಗುರುತಿಸಬಹುದಾದ ಆಯ್ಕೆ ಕಾಣಿಸಿಕೊಳ್ಳಲಿದೆ.



## ಎಡಿಟ್ ಆಯ್ಕೆ ವಿಳಂಬಕ್ಕೆ ಕಾರಣ

'ಜಗತ್ತಿನಲ್ಲಿ ಅತ್ಯಂತ ಪ್ರಬಲ ಸಾಮಾಜಿಕ ಜಾಲತಾಣವಾಗಿ ಗುರುತಿಸಿಕೊಂಡಿರುವ ಟ್ವಿಟರ್‌ನಲ್ಲಿ ಎಡಿಟ್ ಆಯ್ಕೆಯನ್ನು ಕಲ್ಪಿಸಿದರೆ, ಅದನ್ನು ದುರುಪಯೋಗ ಮಾಡಿಕೊಳ್ಳುವ ಸಾಧ್ಯತೆ ಇದೆ. ಎಡಿಟ್ ಟ್ವೀಟ್ ಆಯ್ಕೆಯು ತಪ್ಪು ಮಾಹಿತಿ ಹರಡಲು ಸಹಕಾರಿಯಾಗುತ್ತದೆ. ಹೀಗಾಗಿ ಎಡಿಟ್ ಆಯ್ಕೆಯನ್ನು ಕಲ್ಪಿಸುವುದಿಲ್ಲ' ಎಂಬುದು ಕಂಪನಿಯ ಸ್ಪಷ್ಟ ನಿರ್ಧಾರವಾಗಿತ್ತು. ಇದಕ್ಕೆ ಪೂರಕವಾಗಿ, 2020ರಲ್ಲಿ ಸಂದರ್ಶನವೊಂದರಲ್ಲಿ ಅಂದಿನ ಟ್ವಿಟರ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯೂ ಆಗಿದ್ದ ಜಾಕ್ ಡೊರ್ಸಿಯು ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದರು.

'ಎಡಿಟ್ ಟ್ವೀಟ್ ಆಯ್ಕೆಯು ಪೋಸ್ಟ್‌ಗೆ ಪ್ರತಿಯಾಗಿ ರೀಟ್ವೀಟ್ ಮಾಡುವಾಗ ಹೇಳಿಕೆಯನ್ನು ತಿರುಚುವ ಸಾಧ್ಯತೆ ಇದೆ' ಎಂಬುದು ಕೆಲ ತಂತ್ರಜ್ಞರ ವಾದವಾಗಿತ್ತು. ವಾದ ವಿವಾದಗಳ ನಂತೆ 'ಎಡಿಟ್ ಆಯ್ಕೆ'ಯನ್ನು ಕಂಪನಿಯು ಕಡೆಗೂ ಪರಿಚಯಿಸಿದೆ. ಜಾಕ್ ಡೊರ್ಸಿಯ ಅವರ ಹಿಂದಿನ ಹೇಳಿಕೆಯನ್ನೀಗ ಹಲವರು ಅಪಹಾಸ್ಯ ಮಾಡುತ್ತಿದ್ದಾರೆ. ಜಾಕ್ ಜಾಗಕ್ಕೆ ಭಾರತೀಯ ಮೂಲದ ಪರಾಗ್ ಅಗರ್‌ವಾಲ್ ಬಂದ ಬಳಿಕ ಎಡಿಟ್ ಆಯ್ಕೆಯ ಪ್ರಾಯೋಗಿಕ ಪರೀಕ್ಷೆ ನಡೆದು, ಅಂತಿಮವಾಗಿ ಜಾರಿಗೆ ತರಲಾಗಿದೆ.

## ಟ್ವಿಟರ್ ಬ್ಲೂಗೆ 404 ಶುಲ್ಕ!

ಟ್ವಿಟರ್ ಬಳಕೆಗೆ ಶುಲ್ಕ ವಿಧಿಸುವ ಪ್ರಸ್ತಾವವು ಕಂಪನಿಯ ಮುಂದಿದೆ. ಅದರ ಸಲುವಾಗಿ ಪ್ರಾರಂಭಿಕವಾಗಿ 'ಟ್ವಿಟರ್ ಬ್ಲೂ' ಬಳಕೆದಾರರಿಗೆ ಮಾಸಿಕ ₹404 ರೂಪಾಯಿ ಶುಲ್ಕವನ್ನು ವಿಧಿಸಿದೆ. ಶುಲ್ಕ ವಿಧಿಸಿದ ಸಲುವಾಗಿಯೇ ಎಡಿಟ್ ಆಯ್ಕೆಯನ್ನು ಮೊದಲು ಅವರಿಗೆ ಕಲ್ಪಿಸಲಾಗಿದೆ. 'ಟ್ವಿಟರ್ ಬ್ಲೂ ಟಿಕ್' ಚಂದಾದಾರಿಕೆಗೆ ತಿಂಗಳಿಗೆ ₹404 (4.99 ಡಾಲರ್) ಪಾವತಿಸಿ. 30 ನಿಮಿಷಗಳಲ್ಲಿ ಪೋಸ್ಟ್ ಎಡಿಟ್ ಮಾಡಿ' ಎಂದು ಟ್ವಿಟರ್ ಟ್ವೀಟ್ ಮಾಡಿದೆ.

ಫೇಸ್‌ಬುಕ್, ರೆಡ್ಡಿಟ್ ಮತ್ತು ಪಿಂಟರೆಸ್ಟ್‌ನಂತಹ ಹೆಚ್ಚು ಬಳಕೆದಾರರನ್ನು ಹೊಂದಿರುವ ಸಾಮಾಜಿಕ ಜಾಲತಾಣದ ವೇದಿಕೆಗಳು ಹಲವು ವರ್ಷಗಳಿಂದ ಪೋಸ್ಟ್‌ಗಳನ್ನು ಎಡಿಟ್ ಮಾಡುವ ಆಯ್ಕೆಯನ್ನು ಬಳಕೆದಾರರಿಗೆ ನೀಡಿವೆ. ಈ ಸಾಲಿಗೆ ಟ್ವಿಟರ್ ಸಹ ಸೇರಿದೆ. ■